**ಸಾಕ್ಷಿ ಯನ್ನು ದಿನಾಂಕ: 19-06-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು :- 3 ನೇ ವಾದಿಯವರಿಂದಃ**

ನಾನು ಅನಕ್ಷರಸ್ಥ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡಿರುತ್ತೇನೆ. ಹುಣಸಮಾರನಹಳ್ಳಿಯ ಸರ್ವೆ ನಂ.78 ರ ಒಟ್ಟು ವಿಸ್ತೀರ್ಣ 04 ಎಕರೆ 27 ಗುಂಟೆ ಎಂದರೆ ಸರಿ. ಸದರಿ ಜಮೀನು ಚಕ್ರಪಾಣಿ ಮತ್ತು ಶೇಷಾಚಾರಿಯವರಿಗೆ ಸಮಾನವಾಗಿ ಮಂಜೂರು ಆಗಿತ್ತು ಎಂದರೆ ಸರಿ. ಸರ್ವೆ ನಂ.78 ರ ಪೂರ್ವದ ಕಡೆಯ ಜಮೀನು ಚಕ್ರಪಾಣಿಯವರಿಗೆ ಮತ್ತು ಪಶ್ಚಿಮದ ಕಡೆಗೆ ಶೇಷಾಚಾರಿಯವರಿಗೆ ಮಂಜೂರು ಆಗಿರುತ್ತದೆ ಎಂದರೆ ಸರಿ. ಚಕ್ರಪಾಣಿಯವರಿಗೆ ಮಂಜೂರು ಆದ ಸ್ವತ್ತಿನ ಪೂರ್ವದ ಕಡೆಗೆ ಸರ್ಕಾರಿ ಓಣಿ ಇದೆ ಎಂದರೆ ಸರಿ. ಸದರಿ ಸ್ವತ್ತಿನ ಪಶ್ಚಿಮಕ್ಕೆ ಶೇಷಾಚಾರಿಯವರಿಗೆ ಮಂಜೂರು ಆದ ಸ್ವತ್ತು ಇರುತ್ತದೆ ಎಂದರೆ ಸರಿ. ಚಕ್ರಪಾಣಿಯವರಿಗೆ ಮಂಜೂರು ಆದ ಸತ್ತು ನಂತರ 78/1 ಎಂದು ಹಾಗೂ ಶೇಷಾಚಾರಿಯವರಿಗೆ ಮಂಜೂರು ಆದ ಸ್ವತ್ತು 78/2 ಎಂದು ಆಗಿರುತ್ತದೆ ಎಂದರೆ ಸರಿ. ಸದರಿ ಮಂಜೂರಾತಿ ಆದೇಶದ ಪ್ರಕಾರ ಚಕ್ರಪಾಣಿ ಮತ್ತು ಶೇಷಾಚಾರಿ ಪ್ರತ್ಯೇಕ ಖಾತೆಯಾಗಿ ಪಹಣಿ ಪತ್ರಿಕೆಗಳಲ್ಲಿ ಅವರ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿ. ನಾನು ಸದರಿ ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ. ಶೇಷಾಚಾರ್ ರವರ ಮಗ ಶ್ರೀನಿವಾಸಮೂರ್ತಿ, ಶ್ರೀಲತಾ ಮತ್ತು ಮುರುಳಿಕೃಷ್ಣ ರೆಡ್ಡಿ ರವರ ಹೆಸರಲ್ಲಿ ಒಟ್ಟು 02 ಎಕರೆ 27 ಗುಂಟೆ ಪಹಣಿ ಪತ್ರಿಕೆಯಲ್ಲಿ ನಮೂದು ಆಗಿದೆ ಎಂದರೆ ಸರಿಯಲ್ಲ.

ಸರ್ವೆ ನಂ.78 ರಲ್ಲಿ ಹುಣಸಮಾರನಹಳ್ಳಿ - ಹೊಸಹಳ್ಳಿ ದಾರಿ ಇದೆ ಎಂದರೆ ಸರಿ. ಸರ್ವೆ ನಂ.78 ರಲ್ಲಿ ಇರುವ 02 ಗುಂಟೆ ಬ-ಕರಾಬಿನಲ್ಲಿ ಸದರಿ ದಾರಿ ಹಾದುಹೋಗಿದೆ ಎಂದರೆ ಸರಿಯಲ್ಲ. ಉಳಿದ 5 ಗುಂಟೆ ಜಮೀನಿನಲ್ಲಿ ಚಕ್ರಪಾಣಿಯವರ ಜಮೀನಿನಲ್ಲಿದೆಯೋ? ಅಥವಾ ಶೇಷಾಚಾರ್ ರವರ ಜಮೀನಿನಲ್ಲಿದೆಯೋ? ನನಗೆ ಗೊತ್ತಿಲ್ಲ. ನಮ್ಮ ತಂದೆ ಹೆಸರು ಕೃಷ್ಣಪ್ಪ. ನಮ್ಮ ದೊಡ್ಡಪ್ಪನ ಹೆಸರು ದಾಸಪ್ಪ. ಸಾಕ್ಷಿಯು ಮುಂದುವರೆದು ತಾನು ದಾಸಪ್ಪರವರ ಸಾಕು ಮಗ ಎಂದು ನುಡಿಯುತ್ತಾರೆ. ಚಕ್ರಪಾಣಿಯವರು ಕೃಷ್ಣಪ್ಪ ಮತ್ತು ದಾಸಪ್ಪ ರವರ ವಿರುದ್ಧ ಅವರ ಸ್ವತ್ತಿಗೆ ಸಂಬಂಧಿಸಿದ ಕರಾಬು ಜಮೀನಿನಲ್ಲಿ ತೊಂದರೆ ನೀಡಿರುವ ಬಗ್ಗೆ ಒಂದು ದಾವೆಯನ್ನು ದಾಖಲಿಸಿದ್ದರು ಎಂದರೆ ಕರಾಬು ಜಮೀನಿನ ಬಗ್ಗೆ ದಾಖಲಿಸಿರುವುದಿಲ್ಲ, ಅವರ 02 ಎಕರೆ 10 ಗುಂಟೆ ಬಗ್ಗೆ ದಾಖಲಿಸಿದ್ದರು ಎಂದು ನುಡಿಯುತ್ತಾರೆ. ಸದರಿ ದಾವೆ ಅಸಲು ದಾವಾ ಸಂಖ್ಯೆಃ 128/1998 ಆಗಿದ್ದು, ಬೆಂಗಳೂರು ಗ್ರಾಮಾಂತರ 1 ನೇ ಹೆಚ್ಚುವರಿ ಹಿರಿಯ ಸಿವಿಲ್

This is a True Copy of the Court Records Online. Authenticated @ districts.ecourtsindia.com/cnr/KABR310010432020/truecopy/order-10.pdf

ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ನಮ್ಮ ತಂದೆ ಹಾಗೂ ಕೃಷ್ಣಪ್ಪ ವಕೀಲರ ಮುಖಾಂತರ ಹಾಜರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಸದರಿ ದಾವೆಯಲ್ಲಿ ಚಕ್ರಪಾಣಿಯವರ ಸ್ವತ್ತಿನ ಉತ್ತರಕ್ಕೆ ರಸ್ತೆ ಎಂದು ತೋರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯು ಚಕ್ರಪಾಣಿಯವರ ಪರವಾಗಿ ದಿನಾಂಕಃ 04-12-2002 ರಂದು ತೀರ್ಮಾನ ಆಗಿದೆ ಎಂದರೆ 02 ಎಕರೆ 10 ಗುಂಟೆಯ ಬಗ್ಗೆ ತೀರ್ಮಾನ ಆಗಿದೆ ಎಂದು ನುಡಿಯುತ್ತೇನೆ. ಸದರಿ ದಾವೆಯಲ್ಲಿ ನಮ್ಮ ತಂದೆ ಹಾಗೂ ಕೃಷ್ಣಪ್ಪ ಮತ್ತು ದಾಸಪ್ಪರವರ ವಿರುದ್ಧ ತಡೆಯಾಜ್ಞೆ ನೀಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ತೀರ್ಪನ್ನು ನಾನಾಗಲೀ, ಕೃಷ್ಣಪ್ಪ ಮತ್ತು ದಾಸಪ್ಪರವರಾಗಲೀ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ನ್ಯಾಯಾಲಯ ಚಕ್ರಪಾಣಿಯವರ 02 ಎಕರೆ 10 ಗುಂಟೆ ಮತ್ತು 07 ಗುಂಟೆ ಕರಾಬಿನ ಬಗ್ಗೆ ತೀರ್ಪು ನೀಡಿದೆ ಎಂದರೆ ಸರಿಯಲ್ಲ. ಚಕ್ರಪಾಣಿ, ಶ್ರೀಲತಾ ಮತ್ತು ಮುರುಳಿಕೃಷ್ಣ ರೆಡ್ಡಿ ವಿರುದ್ಧ 07 ಗುಂಟೆ ಕರಾಬು ನಮಗೆ ಸೇರಿದೆ ಎಂದು ನಾವು ಯಾವುದೇ ದಾವೆ ದಾಖಲಿಸಿರುವುದಿಲ್ಲ ಎಂದರೆ ಸರಿ. 07 ಗುಂಟೆ ಕರಾಬು ಜಮೀನು ನಮಗೆ ಸೇರಿದೆ ಎಂಬ ಬಗ್ಗೆ ಯಾವುದೇ ಮೂಲ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಸದರಿ ಮೂಲ ದಾಖಲೆ ಹಾಜರು ಪಡಿಸಿರುತ್ತೇನೆ. ಸದರಿ ಮೂಲ ದಾಖಲೆ ನಿಡಿ-42 ಆಗಿರುತ್ತದೆ. ಸರ್ವೆ ನಂ.78 ರಲ್ಲಿ 07 ಗುಂಟೆ ಕರಾಬನ್ನು ವಜಾ ಮಾಡಿ ನಮಗೆ ಮಾಡಿಕೊಟ್ಟಿರುವ ಬಗ್ಗೆ ದಾಖಲೆ ಇದೆ ಎಂದು ಕೇಳಲು ಆ ಬಗ್ಗೆ ನಿಡಿ-42 ಎಂದು ನಮೂದು ಇದೆ ಎಂದು ನುಡಿಯುತ್ತೇನೆ. ಆ ಬಗ್ಗೆ ಯಾವುದೇ ಕಂದಾಯ ದಾಖಲೆ ಇರುವುದಿಲ್ಲ. ನಾನು ಹೇಳಿದಂತೆ 07 ಗುಂಟೆ ಕರಾಬನ್ನು ವಜಾ ಮಾಡಿ ದಾಖಲೆ ಮಾಡಿಕೊಟ್ಟಿರುವುದಿಲ್ಲ ಹಾಗೂ ಇವತ್ತಿಗೂ ಸಹ ಪಹಣಿ ಪತ್ರಿಕೆಯಲ್ಲಿ 07 ಗುಂಟೆ ಕರಾಬು ಎಂದು ವಾದಿಗಳು ಮತ್ತು ಇತರ ಮಾಲೀಕರ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿಯಲ್ಲ.

ಚಕ್ರಪಾಣಿಯವರು 1998 ರಲ್ಲಿ ಅವರ ಜಮೀನಿಗೆ ಸಂಬಧಿಸಿದಂತೆ ಉತ್ತರದ ಕಡೆಯ 20 ಗುಂಟೆ ವಾದಿಗಳ ತಂದೆ ಕೆ.ವಿ. ನಾಗರಾಜು ರವರಿಗೆ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕ್ರಯಪತ್ರವನ್ನು ಚಕ್ರಪಾಣಿಯವರು ಮಾಡಿಕೊಡದೇ ಇರುವುದರಿಂದ ಕೆ.ವಿ. ನಾಗರಾಜು ರವರು ಇದೇ ನ್ಯಾಯಾಲಯದಲ್ಲಿ ಒಂದು ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯ ಸಂಖ್ಯೆಃ 1826/2006 ಆಗಿದ್ದು, ಆ ಬಗ್ಗೆ ನನಗೆ ಗೊತ್ತು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ತಡೆಯಾಜ್ಞೆಯನ್ನು ತಂದಿದ್ದರೂ ಸಹ ಚಕ್ರಪಾಣಿಯವರು

This is a True Copy of the Court Records Online. Authenticated @ districts.ecourtsindia.com/cnr/KABR310010432020/truecopy/order-10.pdf

ಶ್ರೀಲತಾ ಮತ್ತು ಮುರುಳಿಕೃಷ್ಣ ರೆಡ್ಡಿಯವರಿಗೆ ಸದರಿ 20 ಗುಂಟೆಯನ್ನು ಸೇರಿ 02 ಎಕರೆ 10 ಗುಂಟೆ ಮತ್ತು ಕರಾಬನ್ನು ಸೇರಿಸಿ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಇವತ್ತಿಗೂ ಸಹ ಜಮೀನು ಶ್ರೀಲತಾ ಮತ್ತು ಮುರುಳಿಕೃಷ್ಣ ರವರ ಹೆಸರು ಪಹಣಿ ಪತ್ರಿಕೆಯಲ್ಲಿ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.78/1 ರ ಪಹಣಿ ಪತ್ರಿಕೆ ಈಗ ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಚಕ್ರಪಾಣಿಯವರು ಶ್ರೀಲತಾ ಮತ್ತು ಮುರುಳಿಕೃಷ್ಣ ರೆಡ್ಡಿರವರಿಗೆ ಮಾಡಿಕೊಟ್ಟ ಕ್ರಯಪತ್ರದಲ್ಲೂ ಸಹ ಸದರಿ ಜಮೀನಿನ ಉತ್ತರಕ್ಕೆ ರಸ್ತೆ ಎಂದು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆಃ 1826/2006 ರಲ್ಲಿ ಚಕ್ರಪಾಣಿಯವರು, ಶ್ರೀಲತಾ ಮತ್ತು ಮುರುಳಿಕೃಷ್ಣ ರೆಡ್ಡಿ ಸೇರಿಸಿ ರಾಜೀ ಮಾಡಿಕೊಳ್ಳಲಾಯಿತು ಎಂದರೆ ಸರಿಯಲ್ಲ. ಸದರಿ ರಾಜೀಯಂತೆ ಶ್ರೀಲತಾ ಮತ್ತು ಮುರುಳಿಕೃಷ್ಣ ರೆಡ್ಡಿ ರವರು ತಲಾ 04 ಕಾಲು ಗುಂಟೆ ಜಮೀನನ್ನು ಉತ್ತರದ ಕಡೆಗೆ ಅಂದರೆ ಒಟ್ಟು 08 ವರೆ ಗುಂಟೆ ಜಮೀನನ್ನು ಕೆ.ವಿ. ನಾಗರಾಜು ರವರಿಗೆ ಬಿಟ್ಟುಕೊಟ್ಟು ರಾಜೀ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ರಾಜೀಯಂತೆ ಶ್ರೀಲತಾ ಮತ್ತು ಮುರುಳಿಕೃಷ್ಣ ರೆಡ್ಡಿ ರವರು ಕೆ.ವಿ. ನಾಗರಾಜು ರವರ ಪರವಾಗಿ ದಿನಾಂಕಃ 12-09-2018 ರಂದು ಒಂದು ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದ ಆದ ನಂತರ ಕೆ.ವಿ. ನಾಗರಾಜು ರವರು ಮರಣ ಹೊಂದಿದ ನಂತರ ಇವತ್ತಿಗೆ ಸದರಿ 08 ವರೆ ಗುಂಟೆ ಜಮೀನಿನ ಪಹಣಿ ಅವರ ಮಗ 3 ನೇ ವಾದಿಯ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆಃ 128/1998 ಮತ್ತು 1826/2006, ಈ ದಾವೆ ಹಾಗೂ ಕೆ.ವಿ. ನಾಗರಾಜು ರವರ ಕ್ರಯಪತ್ರದಲ್ಲಿ ಇರುವ ಪೂರ್ವ, ಪಶ್ಚಿಮ ಮತ್ತು ಉತ್ತರ ಕಡೆ ಇರುವ ಚೆಕ್ಕುಬಂದಿ ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. ಹಾಗೆ ಖರೀದಿಸಿದ ನಂತರ ಕೆ.ವಿ. ನಾಗರಾಜು ಮತ್ತು ಅವರ ಕುಟುಂಬದವರು ಸದರಿ ಆಸ್ತಿಯ ಸ್ವಾಧೀನವನ್ನು ಹೊಂದಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಜಮೀನಿನಲ್ಲಿ 05 ಗುಂಟೆಯ ಜಮೀನಿನ ಸ್ವಾಧೀನವನ್ನು ನಾವು ಹೊಂದಿರುತ್ತೇವೆ ಎಂದು ನುಡಿಯುತ್ತಾರೆ. ಹಾಗೆ ವಾದಿಗಳು ಸ್ವಾಧೀನವನ್ನು ಹೊಂದಿರುವಾಗ ದಿನಾಂಕಃ 18-10-2020 ರಂದು ನಾವು ಅತಿಕ್ರಮ ಪ್ರವೇಶ ಮಾಡಿ ಮನೆ ನಿರ್ಮಿಸಲು ಪ್ರಯತ್ನಿಸಿರುತ್ತೇವೆ ಎಂದರೆ ಸುಳ್ಳು. ವಾದಿಗಳು ತಮ್ಮ ಜಮೀನಿನಲ್ಲಿ ಏಕೆ ಮನೆ ನಿರ್ಮಿಸಿರುತ್ತೀರಿ ಎಂದು ಕೇಳಲು ಸದರಿ ಸ್ವತ್ತು ತಮ್ಮ ಸ್ವತ್ತು ಹಾಗೂ ಮನೆ ನಿರ್ಮಿಸುತ್ತೇವೆ ಎಂದು ಅವರಿಗೆ ಹೇಳಿರುತ್ತೇವೆ ಎಂದರೆ ಸರಿಯಲ್ಲ. ಅಸಲು ದಾವಾ ನಂ.128/1998 ರಲ್ಲಿ ನಮ್ಮ ವಿರುದ್ಧ ತಡೆಯಾಜ್ಞೆ ಇದ್ದರೂ ಸಹ ಅದಕ್ಕೂ

This is a True Copy of the Court Records Online. Authenticated @ districts.ecourtsindia.com/cnr/KABR310010432020/truecopy/order-10.pdf

ಮಾನ್ಯತೆ ನೀಡದೇ ಕಾನೂನು ಬಾಹಿರವಾಗಿ ವಾದಿಗಳ ಜಮೀನಿನಲ್ಲಿ ಮನೆ ಕಟ್ಟಲು ನಿರ್ಮಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-14(ಎ) ರಿಂದ (ಡಿ) ರಲ್ಲಿ ಇರುವ ಛಾಯಾ ಚಿತ್ರಗಳು ದಾವಾ ಸ್ವತ್ತಿಗೆ ಸಂಬಂಧಿಸಿದ ಛಾಯಾ ಚಿತ್ರಗಳು ಅಲ್ಲ ಎಂದರೆ ಸರಿಯಲ್ಲ. ಸದರಿ ಛಾಯಾ ಚಿತ್ರಗಳು ದಾವಾ ಸ್ವತ್ತಿಗೆ ಸೇರಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಛಾಯಾ ಚಿತ್ರಗಳಲ್ಲಿ ಕಂಡು ಬರುವ ತಡಪಾಯ ಹಾಗೂ ಮರಗಳು ಕರಾಬು ಜಾಗದಲ್ಲಿ ಇರುತ್ತದೆ.

**ಪ್ರಶ್ನೆ:** ಸದರಿ ಕರಾಬು ಸರ್ವೆ ನಂ.78/1 ರಲ್ಲಿ ಇರುತ್ತದೆಯೇ?

**ಉತ್ತರ:** ಸದರಿ ಕರಾಬು ಸರ್ವೆ ನಂ.78 ರ ಉತರ ದಿಕ್ಕಿನಲ್ಲಿ ಇರುತ್ತದೆ.

ಈಗ ಸರ್ವೆ ನಂ.78/1 ಮತ್ತು 78/2 ನ್ನು ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾವು ಸದರಿ ಸ್ವತ್ತಿನಲ್ಲಿ ಅತೀಕ್ರಮ ಪ್ರವೇಶ ಮಾಡಿ ಮನೆ ಕಟ್ಟಲು ಪ್ರಯತ್ನಿಸಿರುವುದರಿಂದ ಈ ದಾವೆಯಲ್ಲಿ ವಾದಿಗಳು ನಮ್ಮ ವಿರುದ್ಧ ತಡೆಯಾಜ್ಞೆ ತಂದಿದ್ದರು ಎಂದರೆ ಸರಿಯಲ್ಲ. ಸದರಿ ತಡೆಯಾಜ್ಞೆ ಪಡೆದುಕೊಂಡ ನಂತರ ವಾದಿಗಳು ಕಳುಹಿಸಿದ ನೋಟಿಸು ನಮಗೆ ಜಾರಿಯಾಗಿರುತ್ತದೆ. ಸದರಿ ತಡೆಯಾಜ್ಞೆ ಜಾರಿಯಲ್ಲಿರುವುದು ಗೊತ್ತಿದ್ದರೂ ಸಹ ನಾವು ಸದರಿ ಮನೆಯನ್ನು ಪೂರ್ಣಗೊಳಿಸಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಮನೆಯನ್ನು ಪೂರ್ಣಗೊಳಿಸಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ-15(ಎ) ಯಿಂದ (ಕೆ) ಸದರಿ ಮನೆಯ ಛಾಯಾ ಚಿತ್ರಗಳು ಎಂದರೆ ಸರಿ. ಈ ದಾವೆಯು ಚಾಲ್ತಿಯಲ್ಲಿರುವುದನ್ನು ಮರೆಮಾಚಿ ದೇವನಹಳ್ಳಿಯ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ:489/2020 ದಾವೆಯನ್ನು ತಡೆಯಾಜ್ಞೆ ಕೋರಿ ವಾದಿಗಳ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ಸರಿ. ಈ ದಾವೆಯಲ್ಲಿ ತಡೆಯಾಜ್ಞೆ ತೆರವು ಆದ ನಂತರ ಮನೆಯ ಮೇಲ್ಛಾವಣಿಯನ್ನು ತೆಗೆದು ಪುನಃ ಕಟ್ಟಡ ನಿರ್ಮಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ-16(ಎ) ಮತ್ತು (ಬಿ) ನಾವು ನಿರ್ಮಿಸಿದ ಮನೆಯಾಗಿರುತ್ತದೆ. ತಡೆಯಾಜ್ಞೆ ತೆರವು ಆದ ನಂತರ ವಾದಿಗಳು ಮಾನ್ಯ ಉಚ್ಛ ನ್ಯಾಯಾಲಯದ ಮುಂದೆ MFA No.4987/2022 ರಲ್ಲಿ ಪುನಃ ನಮ್ಮ ವಿರುದ್ಧ ತಡೆಯಾಜ್ಞೆ ತಂದ್ದಿದರು ಎಂದರೆ ಸರಿ. ಸದರಿ ತಡೆಯಾಜ್ಞೆಯ ಆದೇಶವನ್ನು ನಾವು ನಿರ್ಮಿಸಿದ ಮನೆಯ ಗೋಡೆಗೆ ಅಂಟಿಸಿದ್ದರು ಎಂದರೆ ಸರಿ. ಮಾನ್ಯ ಉಚ್ಛ ನ್ಯಾಯಾಲಯದ ಮುಂದೆ ತಡೆಯಾಜ್ಞೆ ಇದ್ದರೂ ಸಹ ಮನೆಯ ಕಟ್ಟಡವನ್ನು ಪೂರ್ಣಗೊಳಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-16(ಸಿ) ಯಿಂದ (ಜಿ) ಸದರಿ ಮನೆಯ ಛಾಯಾ ಚಿತ್ರಗಳು ಎಂದರೆ ಸರಿ.

This is a True Copy of the Court Records Online. Authenticated @ districts.ecourtsindia.com/cnr/KABR310010432020/truecopy/order-10.pdf

ಈ ದಾವೆಯಲ್ಲಿ ಸಲ್ಲಿಸಿದ ಲಿಖಿತ ಹೇಳಿಕೆಯಲ್ಲಿ ಸಿವಿಲ್ ನ್ಯಾಯಾಧೀಶರ ಎದುರು ಸಲ್ಲಿಸಿದ ತಡೆಯಾಜ್ಞೆಯ ದಾವೆಯ ಬಗ್ಗೆ ಹೇಳಿದ್ದೇವೆ ಎಂದು ನಮ್ಮ ವಕೀಲರಿಗೆ ಗೊತ್ತು ನನಗೆ ಗೊತ್ತಿಲ್ಲ. ಪ್ರತಿವಾದ ಪತ್ರದಲ್ಲಿ ಸದರಿ ದಾವೆಯ ಬಗ್ಗೆ ಮುಚ್ಚಿಟ್ಟಿರುತ್ತೇವೆ ಎಂದರೆ ಸರಿಯಲ್ಲ.

(ವಾದಿಯ ಕೋರಿಕೆಯ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು).

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**

This is a True Copy of the Court Records Online. Authenticated @ districts.ecourtsindia.com/cnr/KABR310010432020/truecopy/order-10.pdf